ಡಿಸ್ಟ್ರಿಕ್ಟ್ ನಂಬರ್ ಹೆಸರು. ಸಬ್ ರಿಜಿಸ್ಟ್ರಿ ನಂಬರ್ ಹೆಸರು.	ಡಿಸ್ಟ್ರಿಕ್ಟ್ ಬರದುಕೊಳ್ಳುವ ಸಬ್ ರಿಜಿಸ್ಟ್ರಿ ನಂಬರ್ ಹೆಸರು ಇಲ್ಲವೆ ನಾಸನ್ಸ್.	ಡಿಸ್ಟ್ರಿಕ್ಟ್ ಬರಸಿಕೊಳ್ಳುವ ಸಬ್ ರಿಜಿಸ್ಟ್ರಿ ನಂಬರ್ ಹೆಸರು ಇಲ್ಲವೆ ನಾಸನ್ಸ್.	ರಿಜಿಸ್ಟರ್ ಬಗ್ಗೆ ಹಾಜರಾಗಿ ಪಾರ್ಟಿಯ ಹೆಸರು.	ರಿಜಿಸ್ಟ್ರಾರ ಆಫೀಸು.	ಡಾಕ್ಯೂಮೆಂಟ್ ಸ್ವಭಾವ ಮತ್ತು ಕಿಮ್ಮತ್ತು.
ದೊಡ್ಡಬಳ್ಳಾಪುರದ ಸಬ್ ರಿಜಿಸ್ಟ್ರಾರ ಆಫೀಸ್ 1ನೇ ಬುಕ್ಕು 178ನೇ ನಂ.	ಬೆಂಗಳೂರು ತರಪೇಟೆಯಲ್ಲಿರುವ ರಾಮಸ್ವಾಮಪ್ಪನವರ ಕೊಡುಬದ ಮಾರರಾಮಸಂಜೀವಯ್ಯ	ಬೆಂಗಳೂರು ಚಿಕ್ಕಪೇಟೇಯಲ್ಲಿರುವ ರಾಮಸ್ವಾಮಯ್ಯಂಗಾರು	1884ನೇ ಇ॥ ಸವಿ ಅಕ್ಟೋಬರ್ 22	1884ನೇ ಇಸವಿನವಂಬರ್ 22 ತಾರೀಖು	ಅಮಾನಿ ಮದುರೆ ಕೆರೆಹಿಂದೆ ಇರುವ ಸರ್ವೆ 134ನೇ ನಂಬರುಳ್ಳ ತೋಟ 1, ಡಿಟೋ ಕೆರೇಕೆಳಗೆ ಸರ್ವೇ 132ನೇ ನಂಬರ್ ಗದ್ದೆ 1, ಡಿಟೋ ಕೆರೆ ಕೆಳಗೆ ಇರುವ ಸರ್ವೆ ನಂ. 37ನೇ ಗದ್ದೆ 1, ರಾಮದೇವನಟ್ಟಿಗೆ ಕೇರಿದ ಸರ್ವೆ 36ನೇ ನಂಬರುಳ್ಳ ತೋಟ 1, ಡಿಟೋ ರಾಮದೇವನಟ್ಟಿಗೆ ಕೇರಿದ ಸರ್ವೆ 35ನೇ ನಂ. ಗದ್ದೆ 1 ಮಾರಸಂದ್ರ ಗ್ರಾಮಕ್ಕೆ ಕೇರಿದ ಸರ್ವೆ ನಂ. 18ರ ಪೈಕಿ ಯಕರೆ ೩-೦೦ ಆಕಾರ 6ವುಳ್ಳ ಜಮೀನು ಹೊಲ 1 ಮತ್ತೆ ಡಿಟೋ 18ರ ಪೈಕಿ ಯಕರೆ ೩-೦೦ ಆಕಾರ 4-12-0 ವುಳ್ಳ ಹೊಲ 1 ದೊಡ್ಡ ಕುಕಲಳ್ಳಿಗೆ ಕೇರಿದ ಸರ್ವೆ 61ನೇ ನಂಬರುಳ್ಳ ಹೊಲ 1 ಡಿಟೋ ಕುಕಲಳ್ಳಿಗೆ ಕೇರಿದಸರ್ವೆ 64ನೇ ನಂಬರುಳ್ಳ ಹೊಲ1 ಗುಂಡಗುರುಪರದ ಬಳಿ ಇರುವ ಯಕರೆ ೩-೦೦ ಆಕಾರ 5-4-0 ವುಳ್ಳ ಹೊಲ 1 ಈ ಸ್ಥಿತಿಗಳನ್ನ 500 ರೂಪಾಯಿಗಳಿಗೆ ಕ್ರಯಮಾಡಿ ಯಿರುವಂತೆ.

ಎ. ಹೆಚ್. ಮಕ್ಕಿಂಟೈರ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಬಸವೇಗೌಡರ ಆಸ್ತಿ ವಿಷಯವಲ್ಲಿ —

ಅರ್ಜೀದಾರ ಕರಿಗೌಡರು, ಮೃತಪಟ್ಟ ಸದರೀ ಬಸವೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ತಾಲ್ಲೂಕು ಕನ್ನೇಗೌಡನ ಕೊಪ್ಪಲ್ ಸ್ಥಳದ ಕರಿಗೌಡರು ಸದರೀ ವಾಸಸ್ಥರಾಗಿ ಮೃತಪಟ್ಟ ಬಸವೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರಿಗೌಡರ ಅರ್ಜಿಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಫಿಬ್ರವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯವಲ್ಲಿ—

ಅರ್ಜೀದಾರ ರಾಮಸ್ವಾಮಯ್ಯನವರು, ಮೃತಪಟ್ಟ ಸದರೀ ಪುಟ್ಟಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ರಾಮಸ್ವಾಮಯ್ಯನವರು ಆರಕಲ್‌ಗೂಡು ತಾಲ್ಲೂಕು ಮಲ್ಲದಾಸಪಾಳ್ಯದಲ್ಲಿ ವಾಸಸ್ಥರಾಗಿದ್ದು ಮೃತಪಟ್ಟ ಪುಟ್ಟಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗ ಖಾಯಿಷ್‌ಮಾಡಿರುತ್ತಾರೆ.